# ಪುಟ್ಟಧಾನ್ಯಗಳ ಮಹಾಪಯಣ

## ಸಿರಿಧಾನ್ಯಗಳಿಗೆ ಶುಕ್ರದೆಸೆ

ವಿಶ್ವಸಂಸ್ಥೆಯ ‘ಆಹಾರ ಮತ್ತು ಕೃಷಿ ಒಕ್ಕೂಟ’ (ಎಫ್‌ಎಒ) 2023ನೇ ವರ್ಷವನ್ನು ‘ಸಿರಿಧಾನ್ಯಗಳ ವರ್ಷ’ ಎಂದು ಘೋಷಿಸಿದೆ. ಈ ಮೂಲಕ ಕಿರುಧಾನ್ಯಗಳು ಅಂತರರಾಷ್ಟ್ರೀಯ ಗಮನಸೆಳೆದಿವೆ. ಗಾತ್ರದಲ್ಲಿ ಕಿರಿದಾದ ಈ ಧಾನ್ಯಗಳು ಉತ್ತಮ ಆರೋಗ್ಯದ ನಿಟ್ಟಿನಲ್ಲಿ ‘ಸಿರಿ’ಯೇ ಆಗಿವೆ. ಕನಕದಾಸರ ‘ರಾಮಧಾನ್ಯ ಚರಿತೆ’ಯನ್ನು ಸೃಷ್ಟಿಸಿದ ಹೆಮ್ಮೆಯ ಕನ್ನಡ ಪರಿಸರಕ್ಕೆ ಸಿರಿಧಾನ್ಯಗಳು ಚಿರಪರಿಚಿತ ಮತ್ತು ಆಪ್ತ. ಸಿರಿಧಾನ್ಯಗಳಲ್ಲಿನ ಪೌಷ್ಟಿಕಾಂಶಗಳ ಸಮೃದ್ಧಿ, ತಾಳಿಕೆಯ ಗುಣ ಹಾಗೂ ಕೃಷಿಗೆ ಸಂಬಂಧಿಸಿದ ಅನುಕೂಲಗಳು ಚಿರಪರಿಚಿತ. ಆದರೆ, ಈ ಕಿರುಧಾನ್ಯಗಳು ಕಾಲ–ದೇಶಗಳ ನಡುವೆ ನಡೆಸಿರುವ ಪಯಣ ತೆರೆಮರೆಯಲ್ಲಿ ಉಳಿದಿರುವುದೇ ಹೆಚ್ಚು. ಆ ಖಂಡಾಂತರ ಪಯಣ ಮನುಷ್ಯ ನಾಗರಿಕತೆಯ ವಿಕಾಸದಷ್ಟೇ ರೋಚಕ. ಕಿರುಧಾನ್ಯಗಳ ಮಹಾಪಯಣದ ಈ ಸಂಕಥನ, ಕೃಷಿ ಕಥನವಾಗಿ ಮಾತ್ರವಲ್ಲ, ಸಾಂಸ್ಕೃತಿಕ ಕಥನವಾಗಿಯೂ ಮಹತ್ವದ್ದು.

■ ಮಲ್ಲಿಕಾರ್ಜುನ ಹೊಸಪಾಳ್ಯ

ಚಿತ್ರಗಳು: ಜಿ. ಕೃಷ್ಣಪ್ರಸಾದ್, ಐಐಎಂಆರ್, ಪ್ರಜಾವಾಣಿ ಸಂಗ್ರಹ ಮತ್ತು ಲೇಖಕರವು